"ಮಧುರ ಮಕ್ಕಳೇ - ದೂರಾಂದೇಶಿ ಮತ್ತು ವಿಶಾಲ ಬುದ್ಧಿಯವರಾಗಿ, ಶಿವತಂದೆಯ ಕಾರ್ಯದಲ್ಲಿ ಎಂದೂ ತೊಂದರೆ ಮಾಡಬಾರದಾಗಿದೆ, ತೊಂದರೆ ಮಾಡುವಂತಹವರಿಗೆ ಶ್ರೇಷ್ಠ ಪದವಿಯು ಸಿಗಲು ಸಾಧ್ಯವಿಲ್ಲ"

ಪ್ರಶ್ನೆ: ಈ ಪ್ರಪಂಚದಲ್ಲಿ ಮನುಷ್ಯರಿಗೆ ಯಾವ ಚಿಂತೆಯಿರುತ್ತದೆ ಅದು ಸತ್ಯಯುಗೀ ದೇವತೆಗಳಿಗೆ ಎಂದೂ ಇರುವುದಿಲ್ಲ?

ಉತ್ತರ: ಇಲ್ಲಿ ಮನುಷ್ಯರು ತಿಳಿಯುತ್ತಾರೆ ನಾವು ಸಂಪಾದಿಸುವುದನ್ನು ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳು ಭೋಗಿಸುತ್ತಾರೆ ಎಂದು ಆದರೆ ಈ ಚಿಂತೆಗಳು ದೇವತೆಗಳಲ್ಲಿ ಇರುವುದಿಲ್ಲ ಏಕೆಂದರೆ ಅವರ ಮಕ್ಕಳು ಮತ್ತು ಮೊಮ್ಮಕ್ಕಳು ಎಲ್ಲರು ಇಲ್ಲಿಂದಲೇ ಆಸ್ತಿಯನ್ನು ತೆಗೆದುಕೊಂಡು ಹೋಗುತ್ತಾರೆ. ನಮ್ಮದು ಅವಿನಾಶಿ ರಾಜ್ಯಭಾರವಾಗಿದೆ ಎಂದು ತಿಳಿದಿರುತ್ತಾರೆ. ಇಲ್ಲಿಯೇ ಪ್ರತಿಯೊಬ್ಬರೂ ತಮ್ಮ-ತಮ್ಮ ಪುರುಷಾರ್ಥವನ್ನು ಮಾಡಿಕೊಳ್ಳುತ್ತಿದ್ದಾರೆ.

ಗೀತೆ: ಮಾತಾ ಓ ಮಾತಾ ನೀನೇ ಎಲ್ಲರ ಭಾಗ್ಯವಿದಾತ.......................

ಓಂ ಶಾಂತಿ. ಮಕ್ಕಳು ಮಾತೆಯರ ಮಹಿಮೆಯನ್ನು ಕೇಳಿದಿರಿ. ಯಾವ-ಯಾವ ಮಾತೆಯರ ಮಹಿಮೆಯಾಗುತ್ತದೆ ಎಂಬುದು ಮಕ್ಕಳು ತಿಳಿದುಕೊಂಡಿದ್ದಿರಿ. ಮಾತೆಯರಿಗೆ ಇಷ್ಟೊಂದು ಮಹಿಮೆಯನ್ನು ಮಾಡುತ್ತಾರೆ, ಅಂದಾಗ ಅವಶ್ಯವಾಗಿ ಆ ರೀತಿ ಇದ್ದು ಹೋಗಿದ್ದಾರೆ. ಈಗಂತೂ ಅವರಿಲ್ಲ. ಈಗ ಅವರು ಇದ್ದು ಹೋಗಿದ್ದಾರೆ ಎನ್ನುವುದನ್ನೂ ನೀವು ತಿಳಿದುಕೊಂಡಿರಲಿಲ್ಲ. ಜಗದಂಬಾನ ಮಂದಿರಕ್ಕೆ ಹೋಗಿ, ಅಲ್ಲಿ ಏನನ್ನಾದರೂ ಬೇಡುತ್ತಿರುತ್ತಾರೆ. ಕೆಲವರಿಗೆ ಮಕ್ಕಳು ಬೇಕೆನ್ನುವ ಇಚ್ಛೆಯಿರುತ್ತದೆ. ಕೆಲವರು ಆಶೀರ್ವಾದವನ್ನು ಬೇಡುತ್ತಾರೆ. ಈಗ ಆ ಜಡ ಚಿತ್ರವು ಏನೂ ಮಾಡಲು ಸಾಧ್ಯವಿಲ್ಲ ಇದು ಅವರಿಗೆ ತಿಳಿದಿಲ್ಲ ಆದರೆ ಇದು ಭಕ್ತಿಯಾಗಿದೆ. ನಿಮಗೆ ತಿಳಿದಿದೆ ಇವರೆಲ್ಲ ಇದ್ದು ಹೋದವರೆಂದು. ಜಗದಾಂಬಾರವರ ಮಹಿಮೆಯೂ ಇದೆ. ಅದು ಒಬ್ಬರ ಮಹಿಮೆ ಅಲ್ಲ. ನೀವೆಲ್ಲರೂ ಬ್ರಾಹ್ಮಣಕುಲದ ಪಾಲನೆಯನ್ನು ಮಾಡುವಿರಿ, ನಂತರ ದೈವೀ ಕುಲದ ಪಾಲನೆಯನ್ನೂ ಮಾಡುತ್ತೀರಿ. ನೀವು ಈ ಸಮಯದಲ್ಲಿ ಇಡೀ ಜಗತ್ತಿನ ಪಾಲನೆಯನ್ನು ಮಾಡುತ್ತಿರುವಿರೆಂದು ಯಾರಿಗೂ ತಿಳಿದಿಲ್ಲ. ಚಂಡಿಕಾದೇವಿಯ ಮೇಳ ಕೂಡ ನಡೆಯುತ್ತದೆ. ಚಂಡಿಕೆ ಎನ್ನುವ ಹೆಸರನ್ನು ನೋಡಿ ಎಷ್ಟು ಕೆಟ್ಟದಾಗಿದೆ! ಬಾಬಾ ತಿಳಿಸುತ್ತಾರೆ ಯಾರು ಆಶ್ಚರ್ಯವಾಗಿ ಇಲ್ಲಿಂದ ಓಡಿಹೋಗಿ ವಿಚ್ಛೇದನವನ್ನು ಕೊಡುತ್ತಾರೋ ಅವರು ಹೋಗಿ ಚಂಡಾಲರ ಜನ್ಮವನ್ನು ತೆಗೆದುಕೊಳ್ಳುತ್ತಾರೆ. ಮನೆಯಲ್ಲಿ ಚಂಚಲತೆ ಮಾಡುವವರಿಗೆ ಹೇಳಲಾಗುತ್ತೆ - ನೀನು ಚಂಡಿಯಾಗಿರುವೆ, ಚಂಡಾಲ ಆಗಿರುವೆ ಎಂದು. ಶಿವಬಾಬಾರವರ ಮಕ್ಕಳಾದ ನಂತರವೂ ಯಾವಾಗಲೂ ಬಹಳ ಚಂಚಲತೆ ಮಾಡುತ್ತಿರುತ್ತಾರೆ, ಚಂಚಲತೆ ಅರ್ಥಾತ್ ಆಜ್ಞೆಗಳ ಉಲ್ಲಂಘನೆ ಮಾಡುತ್ತಿರುತ್ತಾರೆ. ಶಿವಬಾಬಾ ರವರ ಸೇವೆಯಲ್ಲಿ ತೊಡಕು ಉಂಟುಮಾಡುತ್ತಿರುತ್ತಾರೆ ಅವರು ಅಂತಿಮದಲ್ಲಿ ಜ್ಞಾನದಿಂದಲೇ ಹೋಗಿಬಿಡುತ್ತಾರೆ. ಕೆಲವು ಬ್ರಹ್ಮಾಕುಮಾರಿಯರು ಸೇವಾಕೇಂದ್ರದಲ್ಲಿ ಇರುತ್ತಾರೆ, ಸ್ವಲ್ಪ ಚಂಚಲತೆಯನ್ನು ಮಾಡುತ್ತಿರುತ್ತಾರೆ, ಯಾರನ್ನೂ ಅರ್ಥ ಮಾಡಿಕೊಳ್ಳುವುದಿಲ್ಲ ಅಥವಾ ಕ್ರೋಧ ಮಾಡುತ್ತಿರುತ್ತಾರೆ ಆಗ ಎಲ್ಲರೂ ಹೇಳುತ್ತಾರೆ ಇವರಲ್ಲಿ ಬಹಳ ಕ್ರೋಧವಿದೆ ಎಂದು. ಈಗ ಒಬ್ಬರೇ ಚಂಡಿಕೆ ಅಲ್ಲ ಬಹಳಷ್ಟು ಇದ್ದಾರೆ. ದೇವಿಯರ ಮಹಿಮೆಯೂ ಇದೆ ಮತ್ತು ಈ ರೀತಿ ಯಾರೆಲ್ಲಾ ಚಂಡಿಕೆಯರು ಆಗುತ್ತಾರೋ ಅವರ ಗಾಯನವೂಯಿದೆ. ಆದರೂ ಈಶ್ವರನ ಮಕ್ಕಳಾಗಿದ್ದಾರೆ. ಭಲೆ ಯಾರಾದರೂ ಹೊರಟು ಹೋಗುತ್ತಾರೆ ಆದರೂ ಅವರು ಸ್ವರ್ಗದಲ್ಲಿ ಬರುತ್ತಾರೆ ತಾನೇ. ಮಾಲೀಕರಂತೂ ಆಗುತ್ತಾರಲ್ಲವೇ. ಭಲೆ ಮಾಲಿಕರಂತೂ ರಾಜ-ರಾಣಿಯರೇ ಆಗುತ್ತಾರೆ ಆದರೂ ಪ್ರಜೆಗಳೂ ಸಹ ನಾವು ಮಾಲೀಕರೆಂದು ಹೇಳುತ್ತಾರೆ. ಕಾಂಗ್ರೆಸ್ಸಿಗರೂ ಹೇಳುತ್ತಾರಲ್ಲವೇ ನಮ್ಮ ಭಾರತ ಮಹಾನ್ ಆಗಿದೆ ಎಂದು. ಇತ್ತೀಚೆಗೆ ಹಾಡುಗಳನ್ನು ಹಾಡುತ್ತಾರೆ- ಭಾರತವು ಬಹಳ ಸುಂದರವಾಗಿದೆ ಎಂದು. ಇಂದು ರಕ್ತದ ನದಿಯು ಹರಿಯುತ್ತಿದೆ.

ಈಗ ನೀವು ಬೇಹದ್ದಿನ ತಂದೆಗೆ ಮಕ್ಕಳಾಗಿದ್ದೀರಿ. ಗೋಪಿವಲ್ಲಭನ ಗೋಪಿ-ಗೋಪಿಕೆಯರು ಎಂದು ಗಾಯನ ಮಾಡಲಾಗುತ್ತದೆ. ವಲ್ಲಭ ಎಂದು ತಂದೆಗೆ ಹೇಳಲಾಗುತ್ತದೆ. ಒಬ್ಬ ಗೋಪಿವಲ್ಲಭನಿಗೆ ಅನೇಕ ಗೋಪ-ಗೋಪಿಕೆಯರೆಂದು ಗಾಯನ ಮಾಡಲಾಗುತ್ತದೆ. ಸತ್ಯಯುಗದಲ್ಲಿ ಗೋಪ-ಗೋಪಿಕೆಯರ ಮಾತೇ ಇಲ್ಲ. ಈಗ ನೀವು ಮಕ್ಕಳು ವಿಶಾಲ, ದೂರಾಂದೇಶಿ ಬುದ್ಧಿಯವರಾಗಿದ್ದೀರಿ. ಬುದ್ಧಿಯ ಬೀಗವು ತೆರೆದಿದೆ. ಈ ಜನ್ಮದ ಜೀವನ ಕಥೆಯನ್ನು ನೀವು ಚೆನ್ನಾಗಿ ತಿಳಿದುಕೊಂಡಿದ್ದೀರಿ. ಪ್ರತಿಯೊಬ್ಬರಿಗೆ ನಶೆ ಇರುತ್ತದೆಯಲ್ಲವೆ. ಈಗ ಬಿರ್ಲಾ ಇದ್ದಾರೆ, ಅವರಿಗೆ ತಮ್ಮ ಹಣದ ನಶೆ ಇರುತ್ತದೆ. ನಾನು ಎಲ್ಲರಿಗಿಂತ ಶ್ರೀಮಂತನಾಗಿದ್ದೇನೆ ಎಂದು ತಿಳಿದುಕೊಂಡಿದ್ದಾರೆ. ಆದರೆ ಈಗ ನೀವು ತಿಳಿದುಕೊಂಡಿದ್ದೀರಿ-ಯಾರು ಇಂದು ಸಾಹುಕಾರರಾಗಿದ್ದಾರೋ ಅವರು ನಂತರ ಬಡವರಾಗುತ್ತಾರೆ. ನಿಮ್ಮ ಮತ್ತು ಅನ್ಯ ಮನುಷ್ಯರ ಬುದ್ಧಿಯಲ್ಲಿ ಹಗಲು-ರಾತ್ರಿಯ ವ್ಯತ್ಯಾಸವಿದೆ. ಕೆಲವರಿಗೆ ಕೆಲವೊಂದು ತರಹದ ನಶೆಯಿರುತ್ತದೆ- ನಾನು ಇಂತಹವನಾಗಿದ್ದೇನೆ, ಹೀಗಿದ್ದೇನೆ....... ಬ್ರಹ್ಮಾ ತಂದೆಗೂ ನಾನು ದೊಡ್ಡ ವಜ್ರವ್ಯಾಪಾರಿಯಾಗಿದ್ದೇನೆಂದು ನಶೆಯಿತ್ತಲ್ಲವೆ. ಈಗ ತಿಳಿಯುತ್ತಾರೆ ಆ ನಶೆಯೆಲ್ಲಾ ಕವಡೆಯ

ಸಮಾನವಾಗಿದೆ ಎಂದು. ನೀವು ಮಕ್ಕಳಿಗೆ ಎಷ್ಟೊಂದು ನಶೆ ಏರಿದೆ ! ಅವರು ತಿಳಿಯುತ್ತಾರೆ ನಾವು ಸಂಪಾದಿಸುತ್ತೇವೆ ಮತ್ತು ನಮ್ಮ ಮಕ್ಕಳು- ಮೊಮ್ಮಕ್ಕಳು ಅನುಭವಿಸುತ್ತಾರೆ ಎಂದು. ಆದರೆ ಇಲ್ಲಂತೂ ಆ ಮಾತಿಲ್ಲ. ನಾವು ಬೇಹದ್ದಿನ ತಂದೆಯನ್ನು ತಿಳಿದುಕೊಂಡು ಅವರಿಂದ ಆಸ್ತಿಯನ್ನು ಪಡೆದುಕೊಳ್ಳುತ್ತೇವೆಂದು ನೀವು ತಿಳಿದುಕೊಂಡಿದ್ದೀರಿ. ಅದರ ಪ್ರಾಲಬ್ಧವನ್ನು ನಾವು ಜನ್ಮ ದಿಂದ ಜನ್ಮಕ್ಕೆ ಪದವಿಯನ್ನು ಪಡೆದುಕೊಳ್ಳುತ್ತೇವೆ. ಮಕ್ಕಳು, ಮೊಮ್ಮಕ್ಕಳೆಲ್ಲರೂ ಇಲ್ಲಿ ಪುರುಷಾರ್ಥವನ್ನು ಮಾಡುತ್ತಿದ್ದಾರೆ. 'ನಮ್ಮ ಮೊಮ್ಮಕ್ಕಳು ಅನುಭವಿಸುತ್ತಾರೆ' ಎಂಬ ಸಂಕಲ್ಪಗಳೇ ಅಲ್ಲಿ ಇರುವುದಿಲ್ಲ. ಅವಿನಾಶಿ ರಾಜ್ಯಭಾಗ್ಯವಾಗಿದೆ ಎಂದು ತಿಳಿದಿರುತ್ತಾರೆ. ಇಲ್ಲಿಯ ರಾಜರುಗಳು ತಿಳಿಯುತ್ತಾರೆ- ಮಕ್ಕಳು, ಮೊಮ್ಮಕ್ಕಳು ಅನುಭವಿಸುತ್ತಾರೆ ಎಂದು. ನೀವು ಈಗ ತಂದೆಯಿಂದ ಇಷ್ಟು ಆಸ್ತಿಯನ್ನು ಪಡೆಯುತ್ತೀರಿ, ಇಂತಹ ಕರ್ಮ ಮಾಡುವಿರಿ ಅದರಿಂದ 21 ಜನ್ಮಗಳಿಗೆ ಫಲ ಸಿಗುತ್ತಿರುತ್ತದೆ, ಮಕ್ಕಳು-ಮೊಮ್ಮಕ್ಕಳ ಚಿಂತೆ ಇರುವುದಿಲ್ಲ. ಅವರೂ ಸಹ ಇಲ್ಲೇ ಆಸ್ತಿಯನ್ನು ಪಡೆಯುತ್ತಾರೆ. ನಿಮಗೆ ಎಷ್ಟು ಜ್ಞಾನ ಇದೆ, ಮನುಷ್ಯರು ಏನೂ ತಿಳಿದುಕೊಂಡಿಲ್ಲ. ಗಾಡ್ಫಾದರ್, ಯಾರನ್ನು ಇಷ್ಟು ನೆನಪು ಮಾಡುತ್ತಾರೆ, ಖಂಡಿತ ಅವರಿಂದ ಅಪಾರವಾದ ಸುಖ ಸಿಕ್ಕಿರಬಹುದು. ಗಾಯನಕೂಡ ಮಾಡುವರು ಹೇ ಪರಮಪಿತ ಪರಮಾತ್ಮ, ದಯೆ ತೋರಿಸು ಎಂದು. ಅವರಿಗೆ ಪರಮ ಆತ್ಮನೆಂದು ಹೇಳಲಾಗುತ್ತದೆ, ಅವರು ಸುಪ್ರೀಂ ಆಗಿದ್ದಾರೆ, ಜನನ-ಮರಣ ರಹಿತನಾಗಿದ್ದಾರೆ ಆದ್ದರಿಂದ ಅವರಿಗೆ ಪರಮ ಆತ್ಮ ಅರ್ಥಾತ್ ಪರಮಾತ್ಮನೆಂದು ಹೇಳುತ್ತಾರೆ. ಎಲ್ಲಾ ಆತ್ಮಗಳ ರೂಪವು ಒಂದೇ ರೀತಿಯಿದೆ. ಹೇಗೆ-ಹೇಗೆ ಪುರುಷಾರ್ಥವನ್ನು ಮಾಡುತ್ತಾರೋ ಹಾಗೆ ಪದವಿಯನ್ನು ಪಡೆದುಕೊಳ್ಳುತ್ತಾರೆ. ಇವರ (ಬ್ರಹ್ಮಾರವರ)ಆತ್ಮವು ಚೆನ್ನಾಗಿ ಓದುವುದರಿಂದ ನಾರಾಯಣನ ಪದವಿಯನ್ನು ಪಡೆಯುತ್ತದೆ, ಕೆಲವರು ನಂತರ ಅನುತ್ತೀರ್ಣರಾದರೆ ರಾಮನ ಪದವಿ ಪಡೆಯುತ್ತಾರೆ, ಆತ್ಮವೇ ಆಗುತ್ತದೆಯಲ್ಲವೇ. ನಾನು ಪರಮಪಿತ ಪರಮಾತ್ಮನಿಂದ ರಾಜಯೋಗವನ್ನು ಕಲಿಯುತ್ತಿದ್ದೇನೆಂದು ನೀವು ಆತ್ಮಕ್ಕೆ ತಿಳಿದಿದೆ. ಆತ್ಮವೇ ಮತ್ತೆ ಬಂದು ಹೊಸ ಶರೀರವನ್ನು ಧರಿಸಿ ಪಾತ್ರವನ್ನು ಅಭಿನಯಿಸುತ್ತದೆ, ನರನಿಂದ ನಾರಾಯಣನಾಗುತ್ತದೆ. ನಂಬರ್ವಾರ್ ಪುರುಷಾರ್ಥದನುಸಾರ ಇದು ನೀವು ಮಕ್ಕಳ ಬುದ್ಧಿಯಲ್ಲಿದೆ ಇರುತ್ತದೆ. ನಂತರ ಈ ಜ್ಞಾನವು ಪ್ರಾಯಃಲೋಪವಾಗಿಬಿಡುತ್ತದೆ. ಅಲ್ಲಿ ಯಾರೂ ಪತಿತರು ಇರುವುದಿಲ್ಲ. ಜ್ಞಾನವನ್ನು ಯಾರಿಗೆ ಕೊಡುವುದು? ಪತಿತ ಪಾವನನ್ನು ಇಲ್ಲಿಯೇ ನೆನಪು ಮಾಡಲಾಗುತ್ತದೆ. ಸರಿ ಈಗ ತಿಳಿಯಿರಿ ಗಂಗೆ ಪತಿತ-ಪಾವನಿ ಆಗಿದ್ದರೆ, ಅವಳು ರಾಜಯೋಗವನ್ನಂತೂ ಕಲಿಸಲು ಸಾಧ್ಯವಿಲ್ಲ, ಆದರೆ ತಂದೆಯು ರಾಜಯೋಗವನ್ನು ಕಲಿಸುತ್ತಾರಲ್ಲವೆ. ಈ ಇಡೀ ಡ್ರಾಮದ ರಹಸ್ಯ ಆದಿಯಿಂದ ಅಂತ್ಯದವರೆಗೆ ನೀವು ಮಕ್ಕಳ ಬುದ್ಧಿಯಲ್ಲಿದೆ.

ನೀವೆಲ್ಲರೂ ಒಂದೇ ಕ್ಲಾಸಿನಲ್ಲಿ ವಿದ್ಯೆಯನ್ನು ಓದುತ್ತೀರಿ ಆದರೆ ನಂಬಾರ್ವಾರ್ ಆಗಿದ್ದೀರಿ. ಪ್ರಾರಂಭದಲ್ಲಿ 300 ಜನರ ಭಟ್ಟಿಯಿತ್ತು, ಒಂದುವೇಳೆ ಗೋಶಾಲೆಯಲ್ಲಿ ಸಾವಿರಾರು ಗೋವುಗಳಿದ್ದರೆ ಸಂಭಾಲನೆ ಮಾಡಲು ಸಾಧ್ಯವಾಗುವುದಿಲ್ಲ. ಭಟ್ಟಿಯು ಸ್ವಲ್ಪ ಜನರದ್ದೇ ಆಗಬೇಕಿತ್ತು, ಅವರಲ್ಲಿಯೂ ಕೆಲವರು ಹೊರಟುಹೋಗುತ್ತಾರೆ, ಕೆಲವರು ಸಂಬಂಧ ಮುರಿದುಕೊಳ್ಳುತ್ತಾರೆ. ಕೆಲವು ಮಕ್ಕಳು ತಿಳಿದುಕೊಳ್ಳುತ್ತಾರೆ-ನಾವು ಮೊದಲಿನಿಂದಲೇ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಆದರೆ ಆ ರೀತಿ ಆಗಲ್ಲ. ಹಳಬರು ಎಷ್ಟೊಂದು ಜನ ಬಿಟ್ಟು ಹೊರಟುಹೋದರು! 25-30 ವರ್ಷ ಜ್ಞಾನದಲ್ಲಿರುವವರೂ ಸಹ ಇಷ್ಟೂ ನೆನಪಿನಲ್ಲಿಡುವುದಿಲ್ಲ ಇವರು ಬೇಹದ್ದಿನ ತಂದೆಯಾಗಿದ್ದಾರೆ, ಯಾರಿಂದ ಆಸ್ತಿಯನ್ನು ಪಡೆಯುತ್ತೇವೆ ಎಂದು. ಬಾಬಾ ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ, ಇದು ಸೆಕೆಂಡಿನ ಮಾತಾಗಿದೆ. ತಂದೆಯು ಹೇಳುತ್ತಾರೆ ನೀವು ನನ್ನ ಮಕ್ಕಳಾಗುವುದರಿಂದ ಸ್ವರ್ಗದ ಮಾಲೀಕರಾಗುತ್ತೀರಿ. ಜೀವನ್ಮುಕ್ತಿಯಂತೂ ರಾಜ-ರಾಣಿಯರೂ ಪಡೆಯುತ್ತಾರೆ, ಪ್ರಜೆಗಳೂ ಪಡೆಯುತ್ತಾರೆ. ಸೆಕೆಂಡಿನಲ್ಲಿ ಜೀವನ್ಮುಕ್ತಿ ಎಂದು ಗಾಯನವೂ ಇದೆ. ಯಾವ ಮಕ್ಕಳು ಪೂರ್ತಿ ಓದುವುದಿಲ್ಲ ಅವರು ಏನು ಮಾಡಬಹುದು? ಚಂಚಲತೆ. ಕೆಲಕೆಲವು ಮಕ್ಕಳಂತೂ ಬಹಳ ಆಜ್ಞಾಕಾರಿಗಳಾಗಿರುತ್ತಾರೆ. ತಂದೆಗಿಂತಲೂ ಒಳ್ಳೆಯ ಪದವಿಯನ್ನು ಪಡೆದುಕೊಳ್ಳುತ್ತಾರೆ. ತಂದೆಯು 100-200 ರೂಪಾಯಿ ಸಂಪಾದನೆ ಮಾಡುವವರಾಗಿರುತ್ತಾರೆ, ಅವರ ಮಕ್ಕಳು ಲಕ್ಷಾಧಿಪತಿಗಳಾಗಿ ಬಿಡುತ್ತಾರೆ. ಅದೇ ರೀತಿ ಅಲೌಕಿಕ ಸಂಬಂಧದಲ್ಲಿಯೂ ಹೀಗೆ ಆಗುತ್ತದೆ- ಜ್ಞಾನದಲ್ಲಿ ಏಳು ದಿನದ ಮಗು 25 ವರ್ಷದವರಿಗಿಂತಲೂ ಮುಂದೆ ಹೋಗುತ್ತಾರೆ, ನಂಬರ್ವಾರ್ ಇದ್ದೇ ಇರುತ್ತಾರೆ.

ವಾಸ್ತವದಲ್ಲಿ ನೀವೆಲ್ಲರೂ ಪ್ರಿಯತಮೆಯರಾಗಿದ್ದೀರಿ, ಒಬ್ಬ ಪ್ರಿಯತಮನನ್ನು ನೆನಪು ಮಾಡುತ್ತೀರಿ. ತಂದೆಯು ಬಂದು ನಮಗೆ ಸುಖಧಾಮದ ಆಸ್ತಿಯನ್ನು ಕೊಡುತ್ತಿದ್ದಾರೆಂದು ನಿಮಗೆ ತಿಳಿದಿದೆ. ಲೌಕಿಕ ಪತಿಯಿದ್ದರೂ ಸಹ ಯಾರು ಪತಿಯರ ಪತಿಯಾಗಿದ್ದಾರೆ ಅವರನ್ನು ನೆನಪು ಮಾಡುತ್ತಾರೆ. ಪಾರಲೌಕಿಕ ಪ್ರಿಯತಮನು ಅಮೃತವನ್ನು ಕುಡಿಸುತ್ತಾರೆ ಆದ್ದರಿಂದ ಅವರನ್ನು ನೆನಪು ಮಾಡಲಾಗುತ್ತದೆ, ನಂತರ ನೀವು ಸ್ವರ್ಗದ ಮಾಲೀಕರಾಗುತ್ತೀರಿ, ನಂತರ ಅಲ್ಲಿ ಯಾರನ್ನೂ ನೆನಪು ಮಾಡುವುದಿಲ್ಲ. ಈಗಿನ ಪುರುಷಾರ್ಥದನುಸಾರ 21 ಜನ್ಮಗಳ ಪ್ರಾಲಬ್ಧವನ್ನು ಪಡೆಯುತ್ತೀರಿ. ನಿಮ್ಮ ಬುದ್ಧಿಯು ಎಷ್ಟೊಂದು ವಿಶಾಲವಾಗಿದೆ! ಅದೂ ನಂಬರ್ವಾರ್ ಆಗಿದೆ, ರಾಜ್ಯಪದವಿಯನ್ನೂ ನಂಬರ್ವಾರ್ ಆಗಿ ಪಡೆಯುತ್ತಾರೆ. ನಿಮಗೆ ಎಲ್ಲವನ್ನೂ ತಿಳಿಸಲಾಗಿದೆ. ಇಲ್ಲಿ ಚೆನ್ನಾಗಿ ವಿದ್ಯೆಯನ್ನು ಓದುವುದರಿಂದ ನೀವು ಪದವಿಯನ್ನೂ ಅಷ್ಟು ಶ್ರೇಷ್ಠವಾಗಿ ಪಡೆದುಕೊಳ್ಳುತ್ತೀರಿ. ಇಲ್ಲದಿದ್ದರೆ ಅವಿದ್ಯಾವಂತರು ವಿದ್ಯಾವಂತರ ಮುಂದೆ ತಲೆಬಾಗುತ್ತಾರೆ. ಇದರಲ್ಲಿ ಪುರುಷಾರ್ಥವನ್ನು ಚೆನ್ನಾಗಿ ಮಾಡಬೇಕಾಗಿದೆ. ಈಗ ಪುರುಷಾರ್ಥಕ್ಕೋಸ್ಕರ ಸಮಯವು ಚೆನ್ನಾಗಿದೆ. ಎಲ್ಲಿಯತನಕ ಬದುಕಿರುತ್ತೇವೆಯೋ ಅಲ್ಲಿವರೆಗೆ ಜ್ಞಾನಮೃತವನ್ನು ಕುಡಿಯಬೇಕು ಅಥವಾ

ಓದುತ್ತಿರಬೇಕೆಂದು ನಿಮಗೆ ತಿಳಿದಿದೆ. ಸಸಿಯನ್ನು ನಾಟಿ ಮಾಡಲಾಗುತ್ತಿದೆ. ಕೆಲವರು ಬೇಗ ತಿಳಿದುಕೊಂಡಾಗ ತಿಳಿಯಲಾಗುತ್ತೆ ಇವರಿಗೆ ಒಳ್ಳೆಯ ಪದವಿಯಂತೂ ಸಿಗುವ ಹಾಗೆ ಕಾಣುತ್ತೆ, ಒಳ್ಳೆಯ ಸಮೀಪದ ಹೂವಾಗಿದ್ದಾರೆ. ತನು-ಮನ-ಧನವನ್ನು ಅರ್ಪಣೆ ಮಾಡಿಬಿಟ್ಟಿದ್ದಾರೆ. ಸೇವೆಯನ್ನೂ ಚೆನ್ನಾಗಿ ಮಾಡುತ್ತಾರೆ, ತಮ್ಮ ಸಮಯವೆಲ್ಲಾ ಸೇವೆಗಾಗಿ ಕೊಡುವೆ ಎಂದು ತಿಳಿದುಕೊಳ್ಳುತ್ತಾರೆ, ಅಷ್ಟೂ ಲಾಭವಿದೆ. ಹೇಗೆ ತಂದೆಯು ನಾವು ಜ್ಞಾನ ನೇತ್ರಹೀನ ಕುರುಡರಿಗೆ ಊರುಗೋಲಾಗಿದ್ದಾರೆ ಹಾಗೆ ನಾವೂ ಸಹ ಆಗಬೇಕಾಗಿದೆ. ನೀವು ಪರಸ್ಪರ ಒಬ್ಬರಿಗೊಬ್ಬರು ಊರುಗೋಲಾಗುತ್ತಾ ಹೋಗುತ್ತೀರಿ. ಕುರುಡರನ್ನಾಗಿ ರಾವಣ ಮಾಡಿದ್ದಾನೆ. ಈ ಸಮಯದಲ್ಲಿ ಇಡೀ ಪ್ರಪಂಚ ಲಂಕೆಯಾಗಿದೆ, ಎಲ್ಲರೂ ಶೋಕವಾಟಿಕೆಯಲ್ಲಿದ್ದಾರೆಂದು ನೀವು ತಿಳಿದುಕೊಂಡಿದ್ದೀರಿ. ಅಶೋಕ ಹೋಟೆಲ್ ಎಂದು ಹೆಸರನ್ನಿಟ್ಟಿದ್ದಾರೆ ಅಲ್ಲಿ ತುಂಬಾ ಚೆನ್ನಾಗಿ ಮಜದಿಂದ ಇರುತ್ತಾರೆ. ಯಾರೆಲ್ಲಾ ಕಾಂಗ್ರೆಸ್ಸ್ಗೆ ಸಹಯೋಗವನ್ನು ಕೊಟ್ಟರು, ಅವರೇ ಸುಖವನ್ನು ಪಡೆಯುತ್ತಿದ್ದಾರೆ.

ಈಗ ಬಾಬಾ ಬಂದಿದ್ದಾರೆಂದು ನಿಮಗೆ ತಿಳಿದಿದೆ. ಮಹಾಭಾರತದ ಯುದ್ಧವು ಎದುರಿಗೆ ನಿಂತಿದೆ. ಇದಂತೂ ಆಗಲೇಬೇಕು ಏಕೆಂದರೆ ದ್ವಾರವು ತೆರೆಯಬೇಕಾಗಿದೆ. ದ್ವಾಪರದ ಮಾತೇ ಇಲ್ಲ, ಈಗಂತು ಘೋರ ಅಂಧಕಾರವಿದೆ. ಬ್ರಾಹ್ಮಣರ ರಾತ್ರಿಯು ಈಗ ಪೂರ್ಣವಾಯಿತು, ಬಾಬಾ ಬಂದಿದ್ದಾರೆ. ಈ ಮಾತುಗಳನ್ನು ನೀವು ಮಕ್ಕಳೇ ತಿಳಿದುಕೊಂಡಿದ್ದೀರಿ. ಶಾಲೆಯಲ್ಲಿ ವಿದ್ಯೆಯನ್ನು ಓದುತ್ತಾರೆ, ಕೆಲವರು ಬಹಳ ಒಳ್ಳೆಯ ಅಂಕಗಳನ್ನು ಗಳಿಸುತ್ತಾರೆ, ಇನ್ನೂ ಕೆಲವರು ಅನುತ್ತೀರ್ಣರಾಗುತ್ತಾರೆ. ಅನುತ್ತೀರ್ಣರ ಚಿಹ್ನೆ ಚಂದ್ರವಂಶಿಯಲ್ಲಿ ಹೋಗುವುದಾಗಿದೆ. ರಾಮನಿಗೆ ಕ್ಷತ್ರಿಯರ ಚಿಹ್ನೆಯನ್ನು ಕೊಡಲಾಗಿದೆ. ಅರ್ಥವನ್ನಂತೂ ತಿಳಿದುಕೊಂಡಿಲ್ಲ. ಲವ-ಕುಶರ ಬಗ್ಗೆ ಏನೆಲ್ಲಾ ಮಾತುಗಳನ್ನು ಕುಳಿತು ತಿಳಿಸುತ್ತಾರೆ. ಎಷ್ಟೊಂದು ಸುಳ್ಳು, ದೋಷಗಳನ್ನು ಕುಳಿತು ಹೊರಿಸುತ್ತಾರೆ. ಗಾಯನ ಮಾಡುತ್ತಾರೆ - ರಾಮರಾಜ್ಯ, ರಾಮ ಪ್ರಜೆ, ಧರ್ಮದ ಉಪಕಾರವಾಗಿದೆ ಎಂದು. ನಂತರ ಈ ಎಲ್ಲಾ ಮಾತುಗಳು ಎಲ್ಲಿಂದ ಬಂದಿತು? ಈ ಎಲ್ಲಾ ಮಾತುಗಳು ತಿಳಿದುಕೊಳ್ಳುವಂತಹದ್ದಾಗಿದೆ. ಈ ಜ್ಞಾನವು ನಂಬರ್ವಾರ್ಆಗಿ ನಮ್ಮ ಬುದ್ಧಿಯಲ್ಲಿದೆ ಎಂದು ನೀವು ತಿಳಿದಿದ್ದೀರಿ. ವಿದ್ಯಾರ್ಥಿಗಳು ಬಹಳ ತೀವ್ರವಾಗಿ ಪುರುಷಾರ್ಥವನ್ನು ಮಾಡಬೇಕಾಗಿದೆ. ನಾವು ಈಶ್ವರೀಯ ವಿಧ್ಯಾರ್ಥಿಗಳಾಗಿದ್ದೇವೆ. ಶಿಕ್ಷಕರನ್ನು ಯಾರು ನೆನಪು ಮಾಡುವುದಿಲ್ಲ! ನಾವಾಗಿರುವೆವು ಪತಿತ ಪಾವನ ಈಶ್ವರೀಯ ವಿಧ್ಯಾರ್ಥಿಗಳು. ಇದರಲ್ಲಿ ತಂದೆ, ಶಿಕ್ಷಕ, ಸದ್ಗುರು ಮೂವರೂ ಬರುತ್ತಾರೆ. ನೀವೆಲ್ಲರೂ ಸೀತೆಯರಾಗಿದ್ದೀರಲ್ಲವೆ. ರಾವಣನ ಶೋಕವಾಟಿಕೆಯಲ್ಲಿದ್ದೀರಿ ನಿರಾಕಾರನಾದ ತಂದೆ ಜ್ಞಾನಸಾಗರನಾಗಿದ್ದಾರೆ. ಕೃಷ್ಣನಿಗೆ ಅಥವಾ ಲಕ್ಷ್ಮೀ-ನಾರಾಯಣರಿಗೆ ಈ ರೀತಿ ಹೇಳಲಾಗುವುದಿಲ್ಲ. ಅವರ ಮಹಿಮೆಯೇ ಬಿನ್ನವಾಗಿದೆ. ಗೀತೆಯಲ್ಲೂ ಹಾಡುತ್ತಾರೆ- ಇವರ ಮಹಿಮೆ ಅಪರಮಪಾರವಾಗಿದೆಎಂದು, ಯಾರು ಈ ರೀತಿ ಮಾಡುತ್ತಾರೆ. ಬಾಬಾ, ನಾವು ನಿಮ್ಮಿಂದ ಪೂರ್ಣ ಆಸ್ತಿಯನ್ನು ತೆಗೆದುಕೊಳ್ಳುತ್ತೇವೆಂದು ನೀವು ಹೇಳುತ್ತೀರಿ. ನೀವು ಎಷ್ಟು ಮಧುರರಾಗಿದ್ದೀರಿ, ಎಷ್ಟು ಪ್ರಿಯರಾಗಿದ್ದೀರಿ! ಲಕ್ಷ್ಮಿ-ನಾರಾಯಣರು ಎಷ್ಟು ಮಧುರ, ಎಷ್ಟು ಪ್ರಿಯರಾಗಿದ್ದಾರೆ! ಲಕ್ಷ್ಮಿ-ನಾರಾಯಣರ ಚಿತ್ರವನ್ನು ನೋಡಿ, ಸದಾ ಮುಗುಳ್ನಗುತ್ತಿರುವಂತೆ ತೋರಿಸುತ್ತಾರೆ. ದೇವತೆಗಳು ಈ ಭಾರತದಲ್ಲಿಯೇ ಇದ್ದರೆಂದು ನೀವು ತಿಳಿದುಕೊಂಡಿದ್ದೀರಿ. ಈಗ ಎಲ್ಲಿದ್ದಾರೆ? ನೀವು ಎಲ್ಲರಿಗೂ ಹೇಳಬಹುದು ಇದು ಅವರ ಅಂತಿಮ ಜನ್ಮವಾಗಿದೆ ಎಂದು. ಪುನಃ ಕೃಷ್ಣನಾಗಬೇಕು. ಈಗ ಕೃಷ್ಣಪುರಿಯೂ ಸ್ಥಾಪನೆಯಾಗುತ್ತಿದೆ, ಕೃಷ್ಣನು ರಾಜಯೋಗವನ್ನು ಕಲಿಯುತ್ತಿದ್ದಾನೆ. ನೀವೂ ಕೃಷ್ಣಪುರಿಯಲ್ಲಿ ಹೋಗಲು ಇಚ್ಚಿಸಿದರೆ ರಾಜಯೋಗವನ್ನು ಕಲಿಯಿರಿ. ಲಕ್ಷ್ಮಿ-ನಾರಾಯಣರೆಂದು ಹೇಳುವುದರಿಂದ ಮನುಷ್ಯರು ತಬ್ಬಿಬ್ಬಾಗುತ್ತಾರೆ. ಕೃಷ್ಣನನ್ನು ತೊಟ್ಟಿಲಿನಲ್ಲಿ ತೂಗುತ್ತಾರೆ. ಪೂಜೆಯನ್ನು ಲಕ್ಷ್ಮಿ-ನಾರಾಯಣರಿಗೇ ಮಾಡುತ್ತಾರೆ. ಅವರ ಬಾಲ್ಯ ಚರಿತ್ರೆಯಂತೂ ಏನೂ ಇಲ್ಲ. ರಾಧೆ-ಕೃಷ್ಣರು ನಂತರ ಎಲ್ಲಿಗೆ ಹೋದರು, ಏನಾದರೆಂದು ಯಾರಿಗೂ ತಿಳಿದಿಲ್ಲ. ರಾಧೆ-ಕೃಷ್ಣರು ಪರಸ್ಪರದಲ್ಲಿ ಸಹೋದರ-ಸಹೋದರಿಯರಾಗಿರಲಿಲ್ಲ. ಈಗ ರಾಧ-ಕೃಷ್ಣರ ರಾಜ್ಯವೂ ಇಲ್ಲ. ದ್ವಾಪರಯುಗದಲ್ಲಿ ಅವರ ರಾಜಧಾನಿಯೂ ಯಾರಿಗೂ ತಿಳಿದಿಲ್ಲ. ಅಂದಾಗ ಈ ಎಲ್ಲಾ ಮಾತುಗಳನ್ನು ತಿಳಿಯುವುದಕ್ಕೋಸ್ಕರ ಬಹಳ ಒಳ್ಳೆಯ ಬುದ್ಧಿಯಿರಬೇಕು. ಪುಸ್ತಕಗಳನ್ನು ಮಾಡುವುದರಲ್ಲಿ ಕೂಡ ಪರಿಶ್ರಮವಾಗುತ್ತದೆ. ವಿಷ್ಣುವಿಗೆ ಅಲಂಕಾರವನ್ನು ತೋರಿಸುತ್ತಾರೆ ಆದರೆ ವಾಸ್ತವದಲ್ಲಿ ವಿಷ್ಣುವಿಗೆ ಈ ಅಲಂಕಾರವಿರುವುದಿಲ್ಲ. ವಿಷ್ಣು ಹಾಗೂ ಲಕ್ಷ್ಮಿ-ನಾರಾಯಣರಿಗೆ ಶಂಖು ಇರುವುದಿಲ್ಲ. ಹಾಗಿದ್ದಲ್ಲಿ ನಾವು ಏನನ್ನು ಬರೆಯವುದು? ಮನುಷ್ಯರು ಏನನ್ನು ತಿಳಿದುಕೊಂಡಿಲ್ಲ. ಶಂಖವಂತೂ ನಿಮ್ಮ ಬಳಿಯಿದೆ ಅಂದಾಗ ಅವಶ್ಯವಾಗಿ ಬ್ರಾಹ್ಮಣರಿಗೆ ಅಲಂಕಾರವನ್ನು ಕೊಡಬೇಕು. ಆಗ ಹೇಳುತ್ತಾರೆ - ಈ ಬ್ರಾಹ್ಮಣರು ಎಲ್ಲಿಂದ ಬಂದರು? ಇದನ್ನು ತಿಳಿದುಕೊಳ್ಳುವುದಿಲ್ಲ. ನಾವು ಬ್ರಾಹ್ಮಣರು ಸ್ವದರ್ಶನಚಕ್ರಧಾರಿಗಳಾಗಿದ್ದೇವೆಂದು ನೀವು ತಿಳಿಯಬಹುದು. ಈ ಎಲ್ಲಾ ಮಾತುಗಳನ್ನು ತಿಳಿಸುವುದರಲ್ಲಿ ವಿಶಾಲ ಬುದ್ಧಿಯಿರಬೇಕು. ಪ್ರಜೆಗಳಲ್ಲಿ ಹೋಗುವಂತಹವರು ಮಂದ ಬುದ್ಧಿಯವರು ತಿಳಿದುಕೊಳ್ಳುವುದಿಲ್ಲ. ಅವರು ಅನ್ಯರಿಗೆ ತಿಳಿಸುವುದರಲ್ಲಿ ಬಹಳಷ್ಟು ಕಷ್ಟವೆನ್ನಿಸುತ್ತದೆ. ಬಾಬಾ ಬರೆಯುತ್ತಾರೆ ಆಗಲಿ ಹೋಗಿ ಸಿಕ್ಕಿರುವ ಸ್ವದರ್ಶನಚಕ್ರಧಾರಿ ಬ್ರಹ್ಮಾಮುಖವಂಶಾವಳಿ ಮಕ್ಕಳೇ ಎಂದು. ಆದರೆ ನಿಮ್ಮ ಬಳಿ ಅಲಂಕಾರ ಎಲ್ಲಿದೆ. ಚಿತ್ರಗಳಲ್ಲಿ ದೇವತೆಗಳಿಗೆ ಮೂರನೇ ನೇತ್ರವನ್ನು ತೋರಿಸಿದ್ದಾರೆ ಆದರೆ ಅವರಿಗೆ ಮೂರನೇಯ ನೇತ್ರವೇ ಇಲ್ಲ. ಆದರೆ ಈಗ ನಿಮ್ಮ ಮೂರನೇಯ ನೇತ್ರವು ತೆರೆದಿದೆ. ನೀವು ಶಕ್ತಿಯರ ಮಹಿಮೆಯೇ ಆಗಿದೆ. ಆದರೆ ಜಗದಾಂಬಾ ಇದ್ದಾಗ ಮಕ್ಕಳು ಜೊತೆಯಲ್ಲಿರುತ್ತಾರೆ. ಮೆಜಾರಿಟಿ ಮಾತೆಯರದ್ದಾಗಿದೆ ಮಾತೆಯರನ್ನೇ ಉನ್ನತ ಸ್ಥಾನದಲ್ಲಿರಿಸುತ್ತಾರೆ. ಒಳ್ಳೆಯದು!

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ

ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಮ್ಮ ಸಮಯವನ್ನು ಸೇವೆಯಲ್ಲಿ ಸಫಲ ಮಾಡಬೇಕಾಗಿದೆ. ತನು-ಮನ-ಧನವೆಲ್ಲವನ್ನೂ ಅರ್ಪಣೆ ಮಾಡಿ ಎಲ್ಲಿಯವರೆಗೆ ಬದುಕಿರುವಿರೋ ಅಲ್ಲಿಯವರೆಗೆ ವಿದ್ಯೆಯನ್ನು ಓದುತ್ತಿರಬೇಕು.

2. ಪರಸ್ಪರದಲ್ಲಿ ಒಬ್ಬರಿಗೊಬ್ಬರು ಜ್ಞಾನದ ಪಾಲನೆಯನ್ನು ಮಾಡಬೇಕಾಗಿದೆ. ತಂದೆಯ ಅವಜ್ಞೆಯಾಗುವ ರೀತಿ ಯಾವುದೇ ಕಾರ್ಯವನ್ನು ಮಾಡಬಾರದು.

ವರದಾನ: ಅವಿನಾಶಿ ಅತೀಂದ್ರಿಯ ಸುಖದಲ್ಲಿರುತ್ತ ಎಲ್ಲರಿಗೂ ಸುಖವನ್ನು ಕೊಡುವಂತಹ ಮಾಸ್ಟರ್ ಸುಖದಾತ ಭವ.
ಅತೀಂದ್ರೀಯ ಸುಖ ಅರ್ಥಾತ್ ಆತ್ಮೀಕ ಸುಖ ಅವಿನಾಶಿಯಾಗಿದೆ. ಇಂದ್ರೀಯಗಳು ವಿನಾಶಿಯಾಗಿದೆ. ಆದ್ದರಿಂದ ಅದರಿಂದ ಪ್ರಾಪ್ತಿಯಾಗುವ ಸುಖವೂ ಸಹ ವಿನಾಶಿಯಾಗಿರುವುದು. ಆದ್ದರಿಂದ ಸದಾ ಅತೀಂದ್ರೀಯ ಸುಖದಲ್ಲಿರಿ. ಆಗ ದುಃಖದ ಹೆಸರು ಗುರುತೂ ಸಹ ಬರಲು ಸಾಧ್ಯವಿಲ್ಲ. ಒಂದುವೇಳೆ ಬೇರೆಯವರು ನಿಮಗೆ ದುಃಖ ಕೊಟ್ಟರೂ ಸಹ ನೀವು ತೆಗೆದುಕೊಳ್ಳಬೇಡಿ ನಿಮ್ಮ ಸ್ಲೋಗನ್ ಆಗಿದೆ-ಸುಖ ಕೊಡಿ - ಸುಖ ತೆಗೆದುಕೊಳ್ಳಿ, ದುಃಖ ಕೊಡಬೇಡಿ, ದುಃಖ ತೆಗೆದುಕೊಳ್ಳಬೇಡಿ. ಬೇರೆಯವರು ದುಃಖ ಕೊಟ್ಟರೂ ಸಹ ಅದನ್ನು ಪರಿವರ್ತನೆ ಮಾಡಿ ನೀವು ಸುಖವನ್ನೆ ಕೊಡಿ, ಅವರನ್ನೂ ಸಹ ಸುಖಿಗಳನ್ನಾಗಿ ಮಾಡಿ ಆಗ ಹೇಳಲಾಗುವುದು ಮಾಸ್ಟರ್ ಸುಖದಾತಾ.

ಸ್ಲೋಗನ್: ಅಧಿಕವಾಗಿ ಮಾತನಾಡಿ ಶಕ್ತಿ ಕಳೆದುಕೊಳ್ಳುವ ಬದಲು ಅಂತರ್ಮುಖಿಯ ರಸದ ಅನುಭವಿಗಳಾಗಿ.